ಈ) ಸೇತುವೆ ರಚನೆಯನ್ನು ಸೇತು ಬಂಧನ, ಹಳ್ಳಿ ಹೆದ್ದಾರಿ ಮುಂತಾದ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುತ್ತಿದೆ.

ಸಂಬಾಪುರ ಗ್ರಾಮದ ಯುವಕ ಮಂಡಲದ ಕಟ್ಟಡ ಅಪೂರ್ಣವಾಗಿರುವುದು.

291 (1612) ಶ್ರೀ ಕೆ.ಎಚ್.ಕುರುಡಗಿ (ಮುಂಡರಗಿ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಸಂಬಾಪುರ ಗ್ರಾಮದಲ್ಲಿ ಯುವಕ ಮಂಡಲ ಕಟ್ಟಡವು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿರುವುದು;

ಇ) ಮುಂಡರಗಿ ತಾಲ್ಲೂಕು ಡಂಬಳದಲ್ಲಿ ಯುವಕ ಮಂಡಲ ಅರ್ದಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮಕೈಗೊಳ್ಳ ಲಾಗಿದೆ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಹೌದು

ಆ) ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಯುವಕ ಸಂಘದವರು ಕೂಡ ಸಕ್ರೀಯವಾಗಿ ಉಂತಿಕೆ ಹಾಕಿ ಕಟ್ಟಡದ ನಿರ್ಮಾಣದ ಕಾರ್ಯವನ್ನು ಪೂರ್ಣಹಂತಕ್ಕೆ ತಂದಿರುತ್ತಾರೆ.

ಇ) ಕಟ್ಟಡ ನಿರ್ಮಾಣ ಇನ್ನೂ ಪ್ರಾರಂಭವಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬೀದರ್ ನಗರವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ

292 (1908) ಶ್ರೀ ನಾರಾಯಣ ರಾವ್ ಮನಹಳ್ಳಿ (ಬೀದರ್) : ಮಾನ್ಯ ವಾರ್ತಾ, ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರವು ಒಂದು ಐತಿಹಾಸಿಕ ಮತ್ತು ಪ್ರವಾಸಿ ಸ್ಥಳವೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ನಗರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾಪವಿದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

ಅ) ಹೌದು

ಆ) 1991-92ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬೀದರ್‌ನಲ್ಲಿರುವ ಮಹಮದ್ ಗವಾನ್ ಮದರಸಕ್ಕೆ ಹೊನಲು ಬೆಳಕನ್ನು ಅಳವಡಿಸುವ ಯೋಜನೆಗೆ ಆದ್ಯತೆ

ನೀಡಿರುತ್ತದೆ. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಮೆ: ಮೈಸೂರು ಲ್ಯಾಂಪ್ಸ್, ಲಿ.. ರವರು ರೂ. 5.45 ಲಕ್ಷಕ್ಕೆ ಸಲ್ಲಿಸಿದ ನಕ್ಷೆ ಹಾಗೂ ಅಂದಾಜನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದೆ.

ಸೂಳೆಕೋಟೆ ಸೇತುವೆ ನಿರ್ಮಾಣ

293(1664) ಶ್ರೀ ಕೆ.ಎನ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೋಟೆ ಸೇತುವೆ ನಿರ್ಮಾಣಕ್ಕೆ ಅಂದಾಜು ಮಾಡಿರುವ ಹಣ ಎಷ್ಟು ಹಾಗೂ ಈವರೆವಿಗೂ ಎಷ್ಟು ಹಣ ಖರ್ಚಾಗಿರುತ್ತದೆ;

ಆ) ಇದನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುತ್ತದೆ;

ಇ) ಈ ಸೇತುವೆ ಕೆಲಸವನ್ನು ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಜೆ.ಹೆಚ್.ಅಶ್ವತ್ಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿ ಅಂದಾಜು ವೆಚ್ಚ 42.00 ಲಕ್ಷ ರೂ.ಗಳಾಗಿರುತ್ತದೆ. ಇದುವರೆವಿಗೂ 20.57 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ಆ) 31.00 ಲಕ್ಷರೂ.ಗಳು ಬೇಕಾಗುತ್ತದೆ.

ಇ) ಅನುದಾನದ ಲಭ್ಯತೆಯ ಮೇಲೆ ಸುಮಾರು 2 ವರ್ಷಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಕಡಲು ಕೊರೆತಕ್ಕೆ ಮಾಸ್ಟರ್ ಪ್ಲಾನ್

294 (1615) ಶ್ರೀ ಎ.ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡಲು ಕೊರೆತಕ್ಕೆ ಸಂಬಂಧಿಸಿದಂತೆ ರಾಜ್ಯದ 320ಕಿ.ಮೀ. ಕರಾವಳಿಯ ಉದ್ದಕ್ಕೆ ಏನಾದರೂ ಮಾಸ್ಟರ್ ಪ್ಲಾನು ರಚಿಸಲಾಗಿದೆಯೇ ;

ಆ) ರಚಿಸಲಾಗಿದ್ದಲ್ಲಿ ಅದನ್ನು ಕೇಂದ್ರಕ್ಕೆ ಮಂಜೂರಾತಿ ಹಾಗೂ ಅನುದಾನಕ್ಕಾಗಿ ಯಾವಾಗ ಕಳುಹಿಸಲಾಗಿದೆ ;

ಇ) ಕೇಂದ್ರದಿಂದ ಈ ಉದ್ದೇಶಕ್ಕೆ ಈವರೆಗೆ ಎಷ್ಟು ಅನುದಾನ ಬಂದಿರುತ್ತದೆ ;

ಈ) ಬಂದಿರುವ ಹಣದ ಉಪಯೋಗವಾಗಿದೆಯೇ ;

ಉ) ಕೇಂದ್ರದ ಸಹಾಯದ ಹೊರತಾಗಿ ರಾಜ್ಯದೊಡನೆ ಈ ಬಗ್ಗೆ ಏನಾದರೂ ಯೋಜನೆಗಳಿವೆಯೇ?